ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದು ಪಾಟೀ ಸವಾಲು ಪ್ರತಿವಾದಿ ಪರ ವಕೀಲರಿಂದಃ-

ನಾನು ದಾವಾ ಆಸ್ತಿಯನ್ನು ಕ್ರಯಕ್ಕೆ ಪಡೆದುಕೊಳ್ಳುವ ಪೂರ್ವದಲ್ಲೇ ಆಸ್ತಿಯು ದುರಸ್ತಾಗಿತ್ತು ಎಂದರೆ ಸರಿ. ದಾವಾ ಆಸ್ತಿಯನ್ನು ಖರೀಸಿದ ಸಮಯದಲ್ಲಿ ಸರ್ವೇ ನಂಬರ್ 14/ಎ ಮತ್ತು 14/ಬಿ ಎಂದು ಬರುತ್ತಿರುವುದನ್ನು ಸರಿಪಡಿಸಲು ನೀವೇನಾದರೂ ಅರ್ಜಿ ಸಲ್ಲಿಸಿರುತ್ತೀರಾ ಎಂದರೆ ಸಾಕ್ಷಿ ಒಂದೇ ಚಕ್ಕಂದಿಯಲ್ಲಿ ಇದ್ದುದ್ದರಿಂದ ಯಾವುದೇ ಅರ್ಜಿ ಸಲ್ಲಿಸಿರುವುದಿಲ್ಲಎಂದು ನುಡಿಯುತ್ತಾರೆ. ಸರ್ವೇ ನಂಬರ್ 14ರ ಜಮೀನು ಒಟ್ಟು 10 ಎಕರೆ ವಿಸ್ತೀರ್ಣ ಇರುತ್ತದೆ. ಸರ್ವೇ ನಂಬರ್ 14ರ 10 ಎಕರೆ ಜಮೀನು ಮೂಲತಃ ಮೂಡಲಗಿರಿಯಪ್ಪರವರಿಗೆ ಸೇರಿತ್ತು. ಸದರಿ ಮೂಡಲಗಿರಿಯಪ್ಪನವರು 10 ಎಕರೆ ಜಮೀನಿನ ಪೈಕಿ 10 ಗುಂಟೆ ಸ್ವತ್ತನ್ನು 1 ರಿಂದ 6ನೇ ಪ್ರತಿವಾದಿ ಕುಟುಂಬದವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಿನಾಂಕ 18.04.1957ರಲ್ಲಿ 10 ಗುಂಟೆ ಸ್ವತ್ತಿಗೆ ನೋಂದಾಯಿತ ಕ್ರಯ ಪತ್ರವಾಗಿರುತ್ತದೆ ಎಂದರೆ ಸಾಕ್ಷಿ ಅದು ನನಗೆ ಗೊತ್ತಿರುವುದಿಲ್ಲ ಮತ್ತು ಅವರು ಯಾವತ್ತಿಗೂ ಸ್ವಾಧೀನದಲ್ಲಿ ಇರುವುದಿಲ್ಲ. ಸರ್ವೇ ನಂಬರ್ 14ರ ಜಮೀನಿಗೆ ಸಂಬಂಧಿಸಿದಂತೆ 1957 ರಿಂದ ಯಾವೆಲ್ಲಾ ವ್ಯವಹಾರಗಳು ಆಗಿರುತ್ತವೆ ಎಂದು ನನಗೆ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. 1967ರಲ್ಲಿ ಆದ ಕ್ರಯ ಪತ್ರದಲ್ಲಿ ನಾನು ಭಾಗಿಬಹಿಸಿರುವುದಿಲ್ಲ ಎಂದರೆ ಸಾಕ್ಷಿಯು ಹೌದು, ಅದನ್ನು ನಮ್ಮ ತಾಯಿ ಖರೀದಿಸಿರುತ್ತಾರೆ ನಂತರ ಅವರು ನನಗೆ ವಿಲ್ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ವಾದ ಪತ್ರದಲ್ಲಿ ಮತ್ತು

ಸಾಕ್ಷಿ ಪ್ರಮಾಣ ಪತ್ರದಲ್ಲಿ ನಿಮ್ಮ ತಾಯಿಯವರು ವಿಲ್ ಮಾಡಿರುವ ಬಗ್ಗೆ ಹೇಳಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಸರ್ವೇ ನಂಬರ್ 14 ರಲ್ಲಿ 10 ಎಕರೆ ಜಮೀನನ್ನು ಯಾರು ಯಾರಿಗೆ ಮಾರಾಟು ಮಾಡಿರುತ್ತಾರೆ ಎಂದರೆ ಸಾಕ್ಷಿಯು ಈರಪ್ಪ ಜಯಮ್ಮನವರಿಗೆ ತಲಾ 3 ಎಕರೆ 12 ಗುಂಟೆ ಸ್ವಾಧೀನದಲ್ಲಿ ಇರುತ್ತಾರೆ. ನಮ್ಮ ತಾಯಿಗೆ 2 ಎಕರೆಯಲ್ಲಿ 7 ನೇ ಪ್ರತಿವಾದಿಗೆ ರವರಿಗೆ ಸ್ವಾಧೀನದಲ್ಲಿ ಇರುತ್ತಾರೆ. ಪ್ರಸ್ತುತ ದಾವೆಯಲ್ಲಿ ಈರಪ್ಪ ಮತ್ತು ಜಯಮ್ಮನವರನ್ನು ಈ ದಾವೆಯಲ್ಲಿ ಪಕ್ಷಗಾರರಾಗಿರುವುದಿಲ್ಲ ಎಂದರೆ ಸರಿ.

ನಾನು ಹಾಜರುಪಡಿರುವ ಪಹಣಿ ಪತ್ರಿಕೆಯಲ್ಲಿ 10 ಗುಂಟೆ ಜಮೀನು ಸಿದ್ದಪ್ಪ ಬಿನ್ ಆಣೆಕುಂಟಯ್ಯನವರ ಹೆಸರಿಗೆ ಬರುತ್ತಿದೆ ಎಂದರೆ ಸಾಕ್ಷಿ ಬರುತ್ತಿದೆ ಆದರೆ ಅವರು ಸ್ವಾಧೀನದಲ್ಲಿ ಇರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಸಿದ್ದಪ್ಪ 1 ರಿಂದ 5 ನೇ ಪ್ರತಿವಾದಿಗಳ ತಂದೆ ಮತ್ತು 6 ನೇ ಪ್ರತಿವಾದಿ ಗಂಡ ಎಂದರೆ ಸರಿ. ಅದೇ ರೀತಿ ನಾನು ಹಾಜರುಪಡಿಸಿರುವ ಪಹಣಿ ಪತ್ರಿಕೆಯಲ್ಲಿ ನಿಂಗಮ್ಮ ಕೋಂ ಮರಿವೀರಯ್ಯನವರ ಹೆಸರಿಗೆ 1 ಎಕರೆ 17 ಗುಂಟೆ ಜಮೀನು ಬರುತ್ತಿರುತ್ತದೆ ಎಂದರೆ ಸರಿ. ಅದೇ ರೀತಿ ನಾನು ಹಾಜರುಪಡಿಸಿರುವ ಪಹಣಿ ಪತ್ರಿಕೆಯಲ್ಲಿ 7 ನೇ ಪ್ರತಿವಾದಿ ಲಕ್ಷಣ ಎನುನವವರಿಗೆ 1 ಎಕರೆ ಜಮೀನು ಬರುತ್ತಿರುತ್ತದೆ ಎಂದರೆ ಸರಿ. 1 ರಿಂದ 5 ನೇ ಪ್ರತಿವಾದಿಗಳ ತಂದೆ ಸಿದ್ದಪ್ಪ ಮತ್ತು 7 ನೇ ಪ್ರತಿವಾದಿ ತಂದೆಯ ಸಿದ್ದಪ್ಪ ಬೇರೆ ಬೇರೆ ಎಂದರೆ ಸರಿ.

ದಿನಾಂಕ 18.04.1957 ರಲ್ಲಿ ಸಿದ್ದಪ್ಪನವರು 10 ಗುಂಟೆ

ಖರೀದಿಸಿದಾಗಿನಿಂದಲೂ ಈಗಲೂ ಸಹ ಅವರ ಹೆಸರಿಗೆ ಬರುತ್ತಿದೆ ಎಂದರೆ ಸರಿ. ಸಿದ್ದಪ್ಪ ಬಿನ್ ಆಣೆಮುದ್ದಯ್ಯನವರ ಹೆಸರಿಗೆ ಕ್ರಯ ಪತ್ರದ ಆಧಾರದ ಎಂ.ಆರ್ 72/1956-57 ರಂತೆ ದಾಖಲೆ ಆಗಿರುತ್ತದೆ ಎಂದರೆ ಸರಿ.

ದಿನಾಂಕ 08.07.1967 ರಂದು ನಿಮ್ಮ ತಾಯಿಯವರು 2 ಎಕರೆ ಜಮೀ ನನ್ನು ಮೂಡಲಗಿರಿಯ್ಯನವರಿಂದ ಖರೀಸಿದರುವ ಬಗ್ಗೆ ಕ್ರಯ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ಹಾಜರುಪಡಿಸಿರುವ ಕ್ರಯಪತ್ರ 1967 ರ ಕ್ರಯ ಪತ್ರವಾಗಿರುವುದಿಲ್ಲ ಎಂದರೆ ಸರಿಯಲ್ಲ. ದಿನಾಂಕ 02.03.1970 ರಲ್ಲಿ ಮರಿವೀರಯ್ಯನವರು ಮಾರಾಟ ಮಾಡಿರುವ ಬಗ್ಗೆ ಕ್ರಯ ಪತ್ರವನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸಾಕ್ಷಿಯು ನಾನು ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ದಿನಾಂಕ 25.01.1971 ರಲ್ಲಿ ನಿಮ್ಮ ತಾಯಿಯವರು ಸರ್ವೇನಂಬರ್ 14 ರಲ್ಲಿಯೇ ಜಮೀನನ್ನು ಖರೀದಿಸಿರುತ್ತಾರೆ. 24.01.1969 ರಲ್ಲಿ ಸರ್ವೇ ನಂಬರಿ 14 ರ ಜಮೀನು 14/ಎ, 14/1, 14/2 ಮತ್ತು 14/ಬಿ ಎಂದು ಪೋಡಾಗಿರುತ್ತದೆ ಎಂದರೆ ಸರಿ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ ಕಾರಣ ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)
(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಮಹೇಶ್ ಬಿ.ಟಿ)
1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.